

# ಕಣ್ಣಲ್ಲಿ ನೆಲೆ ನಿಂತ ಸಾಲುದೀಪ

ಕ್ರಿಸ್‌ಮಸ್ ಸಮಯದಲ್ಲಿ ಲಂಡನ್ ಬೀದಿಗಳಲ್ಲಿ ಅಲೆದಾಡುವಾಗ ನೂರಾರು ಕಥೆಗಳು ಕಾಣಸಿಗುತ್ತವೆ. ದೀಪಾಲಂಕಾರದಲ್ಲಿ ಮಿಂದ ರಸ್ತೆಗಳಲ್ಲಿ ಬದುಕಿಗೂ ಹೊಸ ಬೆಳಕು ಸಿಕ್ಕಂತೆ ಭಾಸವಾಗುತ್ತದೆ.

■ **ಪೂರ್ಣಿಮಾ ಭಟ್ಟ ಸಣ್ಣಕೇರಿ**

ಒಂಬತ್ತು ವರ್ಷದ ಸಿಯಾನಾ, ಒಂಬಲಗಾಲಿನ ಬ್ಯಾಂಡೇಜಿನ ಮೇಲೆ ಕೈಯಾಡಿಸುತ್ತ ಗಾಲಿಕುರ್ಚಿಯಲ್ಲಿ ಕೂತಿದ್ದಾಳೆ. ಅವಳ ನೀಲಿ ಕಣ್ಣುಗಳಲ್ಲಿ ಕ್ರಿಸ್‌ಮಸ್ ದೀಪಗಳು ಪ್ರತಿಫಲಿಸುತ್ತಿವೆ. ಲಂಡನ್ನಿನ ಗ್ರೇಟ್ ಆರ್ಮಂಡ್ ಸ್ಟ್ರೀಟ್ ಆಸ್ಪತ್ರೆಯಿಂದ ಅರ್ಧ ಗಂಟೆಯ ಮುಂಚೆ ಹೊರಬಿದ್ದ ಸಿಯಾನಾ, ವಾರ್ಡಿನಲ್ಲಿ ಕಳೆದ ಕಹಿ ದಿನಗಳನ್ನೂ, ಕಾಲುತೊಡೆಯನ್ನು ಚುಚ್ಚಿದ ಹತ್ತಾರು ಸೂಜಿಗಳನ್ನೂ, ವಾಕರಿಕೆ ತರಿಸಿದ ಫಿನಾಯಿಲ್ ವಾಸನೆಯನ್ನೂ, ಎಲುಬು ಕಡಿದು ತಿನ್ನುತ್ತಿರುವಂತೆ ಅನ್ನಿಸುವ ಒಣ ಬ್ರೆಡ್ಡಿನ ರುಚಿಯನ್ನೂ ಪೂರ್ತಿ ಮರೆತಿದ್ದಾಳೆ. ತಲೆ ಮೇಲೆ ಮಿನುಗುತ್ತಿರುವ ನೂರಾರು ನಕ್ಷತ್ರಗಳ ಮಾಲೆಯನ್ನು ಕಣ್ಣೆವೆ ಮುಚ್ಚುವುದ ಮರೆತು ದಿಟ್ಟಿಸುತ್ತಿದ್ದಾಳೆ. ‘ಕೂಗದೆ ಕಿರುಚದೇ ಒಳ್ಳೆಯ ಹುಡುಗಿಯಂತೆ ಇಂಜೆಕ್ಷನ್ ಹಾಕಿಸಿಕೊಂಡೆನಲ್ಲ… ನನಗೆ ಲಂಡನ್ ಬೀದಿಯನ್ನು

